ಶ್ರೀ ಎಸ್. ಪಿ. ಮುದ್ದಹನುಮೇಗೌಡ (ಕುಣಿಗಲ್) : ಮಾನ್ಯ ಉಪಾಧ್ಯಕ್ಷರೆ, ಇದು ಮಾನ್ಯ ಇಂಧನ ಖಾತೆ ಸಚಿವರಿಗೆ ಸಂಬಂಧಪಟ್ಟಿದ್ದು ಕೆ.ಇ.ಬಿ. ನವರು 10-12-98 ರಲ್ಲಿ ಒಂದು ಆದೇಶವನ್ನು ಮಾಡಿ 500 ರೂಪಾಯಿ ಮತ್ತು ಅದಕ್ಕೆ ಹೆಚ್ಚಿನ ಬಿಲ್ಲುಗಳೇನಿವೆ, ಅವುಗಳನ್ನು ಕಡ್ಡಾಯವಾಗಿ ಡಿಮ್ಯಾಂಡ್ ಡ್ರಾಫ್ಟ್ ಮೂಲಕ ಕೊಡಬೇಕೆಂದು ಆದೇಶ ಮಾಡಿದ್ದಾರೆ. ಇದರಿಂದ ಗ್ರಾಮೀಣ ಪ್ರದೇಶಗಳಲ್ಲಿ ಐದು ನೂರು ರೂಪಾಯಿಗಿಂತ ಹೆಚ್ಚಿನ ಬಿಲ್ಲುಗಳನ್ನು ಕಟ್ಟಲು, ಇದಕ್ಕೋಸ್ಕರವೇ ಬ್ಯಾಂಕಿನಲ್ಲಿ ಅಕೌಂಟ್ ಮಾಡಿಕೊಳ್ಳಬೇಕು ಮತ್ತು ಬ್ಯಾಂಕಿನಲ್ಲಿ ಡಿಮ್ಯಾಂಡ್ ಡ್ರಾಫ್ಟ್ ತರುವುದು ರೈತರಿಗೆ ಬಹಳ ಕಷ್ಟವಾಗುತ್ತದೆ. ಆದ್ದರಿಂದ, ಈ ಆದೇಶವನ್ನು ರದ್ದುಪಡಿಸಿ, ಕೊನೇ ಪಕ್ಷ ಗ್ರಾಮೀಣ ಪ್ರದೇಶಗಳಿಗೆ ಇದರಿಂದ ವಿನಾಯಿತಿ ಕೊಡಬೇಕು. ಎರಡನೆಯದು, ತಾವು ಅನಧಿಕೃತ ವಿದ್ಯುತ್ ಸಂಪರ್ಕಗಳನ್ನು ಸಕ್ರಮಗೊಳಿಸುವುದಕ್ಕೆ ದಿನಾಂಕವನ್ನು ನಿಗದಿ ಮಾಡಿದ್ದೀರಿ. ಮತ್ತು ಸಾಕಷ್ಟು ರೈತರೂ ಈಗ ಹಣವನ್ನು ಕಟ್ಟಿದ್ದಾರೆ. ಆದರೆ ಇನ್ನೂ ಅನೇಕ ಅನಧಿಕೃತ ಸಂಪರ್ಕಗಳಿಗೆ ಸಕ್ರಮಗೊಳಿಸುವುದಕ್ಕೆ ರೈತರು ಹಣ ಕಟ್ಟುವುದಕ್ಕೆ ತಯಾರಿದ್ದಾರೆ. ಆದರೆ ನೀವು ನಿಗದಿ ಮಾಡಿರತಕ್ಕ ಕೊನೇ ತಾರೀಖು ಮುಗಿದು ಹೋಗಿರುತ್ತದೆ. ಇದರಿಂದ, ರೈತರು ಹಣ ಕಟ್ಟುವುದಕ್ಕಾಗಿಲ್ಲ. ಮಾರ್ಚ್ ಏಪ್ರಿಲ್ ನಲ್ಲಿ ರೈತರು ಹಣವನ್ನು ಕಟ್ಟುವುದಕ್ಕೆ ಶಕ್ತಿ ಇರುತ್ತದೆ. ಆದ್ದರಿಂದ, ದಯಮಾಡಿ ಇವತ್ತು ಅನಧಿಕೃತ ಪಂಪ್‌ಸೆಟ್‌ಗಳನ್ನು ಸಕ್ರಮಗೊಳಿಸುವುದಕ್ಕೆ ತಾವೇನು ದಿನಾಂಕವನ್ನು ನಿಗದಿ ಮಾಡಿದ್ದೀರಿ, ಅದನ್ನು ವಿಸ್ತರಣೆ ಮಾಡತಕ್ಕಂಥದ್ದು ಮತ್ತು 500 ರೂಪಾಯಿ ಮೇಲ್ಪಟ್ಟು ಡಿಮ್ಯಾಂಡ್ ಡ್ರಾಫ್ಟ್ ಮೂಲಕ ಕೊಡಬೇಕೆಂಬುದನ್ನು ಸಡಿಲಿಸಿ ಗ್ರಾಮಾಂತರ ಪ್ರದೇಶಗಳಿಗೆ ವಿನಾಯಿತಿ ಕೊಡತಕ್ಕಂತಾದ್ದಕ್ಕೆ ತಾವು ದಯಮಾಡಿ, ಸರ್ಕಾರದ ವತಿಯಿಂದ ಉತ್ತರಕೊಡಬೇಕು.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಮಾನ್ಯ ಸದಸ್ಯರು ಎರಡು ಉತ್ತಮವಾದಂಥ ಸಲಹೆಗಳನ್ನು ಕೊಟ್ಟಿದ್ದಾರೆ. ಡಿಮ್ಯಾಂಡ್ ಡ್ರಾಫ್ಟ್ ಮೂಲಕ ಗ್ರಾಮಾಂತರ ಪ್ರದೇಶದವರು ಕಟ್ಟುವುದಕ್ಕೆ ಸಾಧ್ಯವಾಗುವುದಿಲ್ಲ, ಇದಕ್ಕೆ ವಿನಾಯಿತಿ ಕೊಡಿ ಎಂದು ಕೇಳಿದ್ದಾರೆ. ಈ ದಿವಸವೇ ಅಧಿಕಾರಿಗಳ ಜೊತೆ ಮಾತನಾಡಿ, ರೈತರಿಗೆ ವಿನಾಕಾರಣ ತೊಂದರೆಯಾಗುತ್ತಿರುವುದನ್ನು ಪರಿಹಾರ ಮಾಡುವಂತಾದ್ದು ಮತ್ತು ನಾವೇನು ಅವಧಿಯನ್ನು ನಿರ್ಧಾರಪಡಿಸಿದ್ದೆವು, ಆ ಅವಧಿಯನ್ನು ಮುಂದುವರಿಸಬೇಕೆಂದು ಹೇಳುವಾಗ, ಅದರ ಸಾಧಕ ಬಾಧಕಗಳೇನು ಎಂಬ ವಿಚಾರ ನನಗೆ ಗೊತ್ತಿಲ್ಲ. ಆದರೂ, ಇದೊಂದು ಉತ್ತಮವಾದಂಥ ಸಲಹೆ. ಅನಧಿಕೃತವಾದುದನ್ನು ಅಧಿಕೃತಗೊಳಿಸುವುದಕ್ಕೆ ಹಣ ಕಟ್ಟಲಿಕ್ಕೆ ಮೊದಲು ರೈತರ ಹತ್ತಿರ ಹಣ ಇರಲಿಲ್ಲ, ಈಗಾಗಲೇ ಸುಗ್ಗಿಯಾಗಿದೆ, ಈಗ ಅವರ ಕೈಯಲ್ಲಿ ಹಣ ಇದೆ. ಆದ್ದರಿಂದ, ಈಗ ಹಣ ಕಟ್ಟುತ್ತಾರೆ ಎಂಬ ವಿಚಾರದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಈ ದಿವಸವೇ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಅಧ್ಯಕ್ಷರ ಜೊತೆ ಮತ್ತು ಮಾನ್ಯ ಸಚಿವರ ಜೊತೆ ಮಾತನಾಡಿ, ನಾಳೆ- ನಾಡಿದ್ದರಲ್ಲಿ ಈ ಬಗ್ಗೆ ಕ್ರಮ ಕೈಗೊಳ್ಳುತ್ತೇವೆ.

(ಖ) ಕಳ್ಳಂಬೆಳ್ಳ ಮತ್ತು ಬುಕ್ಕಾಪಟ್ಟಣ ಹೋಬಳಿಗಳಲ್ಲಿ ಕುರಿ ಸಾಕಾಣಿಕೆ ಅಭಿವೃದ್ಧಿ ಯೋಜನೆ.

ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ನನ್ನ ಕ್ಷೇತ್ರದ ಕಳ್ಳಂಬೆಳ್ಳ ಮತ್ತು ಬುಕ್ಕಾ ಪಟ್ಟಣ ಹೋಬಳಿಯಲ್ಲಿ ಕುರಿ ಸಂಪತ್ತು ಹೆಚ್ಚು. ಸ್ವಾಭಾವಿಕವಾಗಿ ಯಾದವ ಜನಾಂಗದವರು ಇವುಗಳನ್ನು ಹೆಚ್ಚು ಸಾಕುತ್ತಾರೆ. ಈ ಕುರಿಗಳನ್ನು ಅಭಿವೃದ್ಧಿಪಡಿಸುವುದಕ್ಕೋಸ್ಕರ ಸರ್ಕಾರ ಒಂದಲ್ಲ ಒಂದು

ರೀತಿಯಲ್ಲಿ ಯೋಜನೆಗಳ ಮುಖೇನ, ಬ್ಯಾಂಕುಗಳ ಆರ್ಥಿಕ ಸಹಾಯದಿಂದ, ಸಾವಿರಾರು ಕುರಿಗಳನ್ನು ಕೊಳ್ಳುವುದಕ್ಕೆ ಸಹಾಯ ಮಾಡಿರತಕ್ಕಂತಾದ್ದು ತಮ್ಮ ಸರ್ಕಾರ. ಇವತ್ತು ಎರಡು ಹೋಬಳಿಗೆ ಸೀಮಿತವಾಗಿ ಹೇಳಬೇಕೆಂದರೆ, ಬ್ಯಾಂಕುಗಳು, ಐ ಆರ್ ಡಿ ಪಿ ಮತ್ತು ವಿವಿಧ ಯೋಜನೆಗಳ ಮುಖೇನ ಮತ್ತು ಕುರಿ ಮಂಡಳಿಯ ಸಹಾಯದಿಂದ ಸಾವಿರಾರು ಕುರಿಗಳನ್ನು ಕೊಂಡುಕೊಂಡ ಸಂದರ್ಭದಲ್ಲಿ ಸರ್ಕಾರದ ಜವಾಬ್ದಾರಿಕೆ ಕೂಡ ಇದೆ. ಆದರೆ, ಇವುಗಳಿಗೆ ಖಾಯಿಲೆ ಬಂದಂಥ ಸಂದರ್ಭದಲ್ಲಿ ತಕ್ಕುದಾದ ಮದ್ದನ್ನು ಕೊಡಿಸಲಿಕ್ಕೆ ಜವಾಬ್ದಾರಿಯೂ ಇದೆ. ಅಲ್ಲಿ ಬಂದಂಥ ವೈರಸ್ ಖಾಯಿಲೆಯಿಂದಾಗಿ ಮತ್ತು ಇದಕ್ಕೆ ತಕ್ಕ ಔಷಧಿ ಸಿಗದಿರುವ ಕಾರಣ, ಸಾಲದ ಮುಖೇನ ತಂದಂಥ ಈ ಎಲ್ಲಾ ಕುರಿಗಳೂ ಸಂಪೂರ್ಣವಾಗಿ ಸತ್ತುಹೋಗಿರತಕ್ಕ ಸಂದರ್ಭವಿದೆ. ಒಂದೊಂದು ಹಳ್ಳಿಗೆ ಒಂದು-ಒಂದೂವರೆ ಸಾವಿರ ಕುರಿಗಳು ಸತ್ತು ಹೋಗಿರತಕ್ಕ ಸಂದರ್ಭ ಇದೆ. ಇದರ ಬಗ್ಗೆ ಸರ್ಕಾರದ ಜವಾಬ್ದಾರಿ ಇದೆ. ಆ ಜವಾಬ್ದಾರಿಯನ್ನು ಸರ್ಕಾರ ನಿರ್ವಹಿಸಿದ ಹಾಗೆ ಆಗಿಲ್ಲವೆಂಬ ಭಾವನೆ ನಮಗಾಗಿದೆ. ಏಕೆಂದರೆ, ಈ ಖಾಯಿಲೆಗೆ ತಕ್ಕ ಔಷಧಿಯನ್ನು ಕೊಡಲಿಕ್ಕೆ ಸಾಧ್ಯವಾಗಿಲ್ಲ. ಇದರ ಬಗ್ಗೆ ಒಂದು ವಿಚಾರ ಸಂಕಿರಣವನ್ನು ಮಾಡಿ, ತಪ್ಪು ಎಲ್ಲಾಯಿತು, ಸರ್ಕಾರದ ಕಡೆಯಿಂದಲೇ ಆಯಿತು ಎಂಬುದನ್ನು ಎಲ್ಲಾ ಅಧಿಕಾರಿಗಳು ಮತ್ತು ತಜ್ಞರೂ ಕೂಡ ಒಪ್ಪಿಕೊಳ್ಳುತ್ತಾರೆ ಎಂಬ ಸಂದರ್ಭ ಈಗಾಗಲೇ ಮೊನ್ನೆತಾನೆ ನಡೆದಿದೆ.

12.10 ಪಿಎಂ

ಈಗಾಗಲೇ ಸಾಲಗಾರರು ಬ್ಯಾಂಕಿನ ಮುಖೇನ ಸಾಲ ವಸೂಲಿಗೋಸ್ಕರ ಕುರಿ ಸತ್ತು ಹೋದವು ಎನ್ನುವ ಕಾರಣಕೋಸ್ಕರ ವಸೂಲಿ ಮಾಡತಕ್ಕಂಥಾದಕ್ಕೆ ಸಾಕಷ್ಟು ತಗಾದೆ ಮಾಡಿ ರೈತರು ಊರುಗಳು ಬಿಡತಕ್ಕಂಥ ಪರಿಸ್ಥಿತಿಯಾಗಿದೆ. ಇಂತಹ ಸಂದರ್ಭದಲ್ಲಿ ಸರ್ಕಾರ ಮಧ್ಯೆ ಪ್ರವೇಶ ಮಾಡಿ ಅವರಿಗೆ ಯಾವ ರೀತಿಯಲ್ಲಾದರೂ ಒಂದು ಪರಿಹಾರ ಕೊಡತಕ್ಕಂಥ ಕೆಲಸ ಮಾಡಬೇಕು. ಎಷ್ಟು ಕುರಿಗಳು ಸತ್ತು ಹೋಗಿವೆ? ಎಷ್ಟು ಕುರಿಗಳ ಪೋಸ್ಟ್ ಮಾರ್ಟಂ ಆಗಿವೆ ಎನ್ನುವ ದಾಖಲಾತಿಗಳು ಜಿಲ್ಲಾಧಿಕಾರಿಗಳ ಮಟ್ಟದಲ್ಲಿ ಇವೆ. ಈ ಎಲ್ಲಾ ಅಂಕಿಅಂಶಗಳನ್ನು ಸರ್ಕಾರ ಒಂದು ನಿಮಿಷದಲ್ಲಿ ತರಿಸುವುದಕ್ಕೆ ಸಾಧ್ಯವಾಗುತ್ತದೆ. ನಾನು ತಮ್ಮಲ್ಲಿ ಇಷ್ಟೇ ಅರಿಕೆ ಮಾಡಿಕೊಳ್ಳತಕ್ಕಂಥಾದ್ದು. ಸರ್ಕಾರ ಮಧ್ಯೆ ಪ್ರವೇಶ ಮಾಡಿ ಕುರಿ ಸಂಪತ್ತನ್ನು ಉಳಿಸಬೇಕು, ಆ ಕಸಬನ್ನು ನಂಬಿರತಕ್ಕ ಜನರಿಗೆ ಸಹಾಯ ಮಾಡಬೇಕೆಂದು ಹೇಳಿ ನಾನು ಸ್ಪಷ್ಟವಾದ ನಿರ್ದಿಷ್ಟವಾದ ಉತ್ತರವನ್ನು ಸರ್ಕಾರದಿಂದ ಬಯಸುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೇ, ಬಹಳ ಗಹನವಾದ ವಿಷಯವನ್ನು ಸರ್ಕಾರದ ಗಮನಕ್ಕೆ ಮಾನ್ಯ ಉಪನಾಯಕರು ತಂದಿದ್ದಾರೆ. ನೀಲಿ ನಾಲಿಗೆ ರೋಗದಿಂದ ಮತ್ತು ಸಾಂಕ್ರಾಮಿಕವಾಗಿ ಕುರಿಗಳು ಸತ್ತಿದ್ದಾವೆ ಎನ್ನತಕ್ಕಂಥ ವಿಚಾರವನ್ನು ಈ ಸದನದಲ್ಲಿ ಎರಡು ಮೂರು ಭಾರಿ ಮಾನ್ಯ ಸದಸ್ಯರುಗಳು ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಸಚಿವರಾದ ನಿಂಗಯ್ಯನವರು ಈ ಮನೆಯಲ್ಲಿ ಮತ್ತು ಮೇಲ್ಮನೆಯಲ್ಲಿ ಉತ್ತರವನ್ನು ಕೊಟ್ಟಿದ್ದಾರೆ. ಈ ಐ ಆರ್ ಡಿ ಪಿ ಸಾಲವನ್ನು ತೆಗೆದುಕೊಂಡಾಗ ಕುರಿಗಳು ಸತ್ತು ಹೋದಾಗ ಕೆಲವು ನಿಯಮಾವಳಿಗಳ ಪ್ರಕಾರ ಅರ್ಜಿಯನ್ನು ಬರೆದುಕೊಳ್ಳಬೇಕಾಗಿರತಕ್ಕಂಥಾದ್ದು ಇದೆ. ಅನೇಕ ಸಂದರ್ಭಗಳಲ್ಲಿ ಅನಕ್ಷರಾದಂತಹ ರೈತರು ಅಂತಾದ್ದು ಏನಾದರೂ ಮಾಡದೇ ಇದ್ದರೆ ಎರಡು ಭಾಗ ತಾವು ಹೇಳಿದಂತೆ ಸರ್ಕಾರ ಹಣ ಬಿಡುಗಡೆ ಮಾಡುತ್ತೇವೆಂದು ಈಗಾಗಲೇ ಮಾನ್ಯ ಸಂಬಂಧಪಟ್ಟ

ಸಚಿವರು ಉತ್ತರ ಕೊಟ್ಟಿದ್ದಾರೆ. ಅದಕ್ಕೆ ಬೇಕಾಗಿರತಕ್ಕಂಥ ಪೂರಕ ಔಷಧಿಗಳನ್ನು ರೋಗವನ್ನು ತಡೆಗಟ್ಟುವಂತಹ ವಿಚಾರದಲ್ಲಿ ಕ್ರಮ ಕೈಗೊಳ್ಳತಕ್ಕಂಥಾದ್ದು, ಮತ್ತು ಐ ಆರ್ ಡಿ ಪಿ ಸಾಲ ತೆಗೆದು ಕೊಂಡಂತಹವರಿಗೆ ಮಾಫಿ ಮಾಡುವ ವಿಚಾರದಲ್ಲಿ ಅಥವಾ ಇನ್‌ಶೂರೆನ್ಸ್ ಮೂಲಕವಾಗಿ ಹಣ ಕಟ್ಟುವಂಥಾದ್ದೋ ಅಥವಾ ಅದರ ಮೂಲಕವಾಗಿ ಆ ಸಾಲವನ್ನು ಮಧ್ಯಾವಧಿ ಸಾಲವನ್ನಾಗಿ ಪರಿವರ್ತಿಸಬೇಕೋ ಎನ್ನುವ ವಿಚಾರ ನನಗೆ ಗೊತ್ತಿಲ್ಲ. ಆದ್ದರಿಂದ ನಾನು ಸರ್ಕಾರದ ಜೊತೆ ಮಾತನಾಡಿ ನಿರ್ದಿಷ್ಟವಾದ ಉತ್ತರವನ್ನು ನಾನು ನಾಳೆ ಅಥವಾ ನಾಡಿದ್ದು ತಿಳಿಸುತ್ತೇನೆ.

ಎ) ದ. ಕನ್ನಡ ಜಿಲ್ಲೆಯಲ್ಲಿ ವಿದ್ಯುತ್ ಕಡಿತದಿಂದ ಸಾರ್ವಜನಿಕರಿಗೆ ತೊಂದರೆ

ಶ್ರೀ ಕೆ. ಜಯರಾಮಶೆಟ್ಟಿ (ಉಳ್ಳಾಲ) : ಮಾನ್ಯ ಅಧ್ಯಕ್ಷರೇ, ಕಳೆದ 10 ದಿವಸಗಳಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿಶೇಷವಾಗಿ ಮಣಿಪಾಲ ಮತ್ತು ಉಡುಪಿ ಈ ಎಲ್ಲಾ ಕಡೆಗಳಲ್ಲಿ ವಿದ್ಯುಚ್ಛಕ್ತಿ ಮಂಡಳಿಯವರು ಅನಧಿಕೃತವಾಗಿ 8-10 ಗಂಟೆಗಳ ಕಾಲ ಲೋಡ್ ಷೆಡ್ಡಿಂಗ್ ಮಾಡುತ್ತಿದ್ದಾರೆ. ಇದರಿಂದಾಗಿ ಸಣ್ಣ ಕೈಗಾರಿಕೆಗಳು, ಪತ್ರಿಕೆಗಳು, ಮತ್ತು ಕುಡಿಯುವ ನೀರಿಗೆ ತುಂಬಾ ತೊಂದರೆಯಾಗಿದೆ. ಮಂಗಳೂರು ನಗರಪಾಲಿಕೆಗೆ ತುಂಬೆ ವೆಂಟೆಡ್ ಡ್ಯಾಮ್‌ನಿಂದ ಪೂರ್ಣ ಪ್ರಮಾಣದಲ್ಲಿ ನೀರು ಸರಬರಾಜು ಆಗುತ್ತಿಲ್ಲ. ಕುಡಿಯುವ ನೀರಿಗೆ ತೀವ್ರ ತೊಂದರೆ ಇದೆ. ನಾನು ಸರ್ಕಾರವನ್ನು ಕೇಳುತ್ತಿದ್ದೇನೆ. ವಿದ್ಯುತ್ ಮಂಡಲಿಯವರಿಗೆ ಒಂದು ನಿಯಮಾವಳಿ ಇಲ್ಲವೆ. ನಾವು ಕೇಳಿದರೆ ಬೆಂಗಳೂರಿನಿಂದ ಆದೇಶ ಬಂದಿದೆ. ಟ್ರಿಪ್ ಆಗುತ್ತಾ ಉಂಟು, ನಾವು ಬೇರೆ ಬೇರೆ ಕಾರಣಗಳಿಗೋಸ್ಕರ ಅನಧಿಕೃತವಾಗಿ ನಾವು ಲೋಡ್ ಷೆಡ್ಡಿಂಗ್ ಮಾಡುತ್ತೇವೆಂದು ಹೇಳುತ್ತಾರೆ. ನಾನು ಸರ್ಕಾರವನ್ನು ಕೇಳುತ್ತಿದ್ದೇನೆ ನೀವು ನಿಯಮತವಾಗಿ ಒಂದು ದಿವಸದಲ್ಲಿ ಇಂತಿಷ್ಟು ಗಂಟೆಗಳ ಕಾಲ ಲೋಡ್ ಷೆಡ್ಡಿಂಗ್ ಮಾಡುತ್ತೇವೆಂದು ಹೇಳಿಲ್ಲವೇ ಅಥವಾ ಯಾವ ಕ್ರಮದಲ್ಲಿ ಲೋಡ್ ಷೆಡ್ಡಿಂಗ್ ಮಾಡಿಕೊಳ್ಳುತ್ತಿದ್ದೀರಿ. ಅಥವಾ ಎಲ್ಲಾ ಜಿಲ್ಲೆಗಳಿಗೂ ಈ ತರಹ ಮಾಡುತ್ತಿದ್ದೀರಾ? ಇದಕ್ಕೆ ಏನು ಕಾರಣ? ಜನರನ್ನು ಕತ್ತಲೆಯಲ್ಲಿಟ್ಟುಕೊಳ್ಳತಕ್ಕಂಥಾದ್ದು ಈಗ ವಿದ್ಯಾರ್ಥಿಗಳಿಗೆ ಪರೀಕ್ಷೆಗಳು ಆಗುತ್ತಾ ಉಂಟು, ಓದುವುದಕ್ಕೆ ಆಗುವುದಿಲ್ಲ. ನೀವು ಸೀಮೆಎಣ್ಣೆ ಸಪ್ಲೈ ಮಾಡುತ್ತಿಲ್ಲ. ಸೂಟೆ ಹಿಡಿದುಕೊಂಡು ಓದಿಸೋಣ ಅಂದರೆ ಸೌದೆ ಸಹ ಸಿಗುತ್ತಿಲ್ಲ. ತೆಂಗಿನ ಮರಗಳಿಗೆ ರೋಗ ಬರುತ್ತಾ ಉಂಟು. ಯಾವುದೇ ತೊಂದರೆ ಇಲ್ಲದೆ ನಿಯಮಿತವಾಗಿ ನೀವು ಎಷ್ಟು ಗಂಟೆಗಳ ಕಾಲ ವಿದ್ಯುತ್ ಸರಬರಾಜು ಮಾಡುತ್ತೀರಿ ಎನ್ನುವ ಬಗ್ಗೆ ಸರ್ಕಾರ ನೇರವಾದ ಉತ್ತರವನ್ನು ಕೊಡಬೇಕು. ವಿದ್ಯುತ್ ತೊಂದರೆಯಿಂದ ಮಂಗಳೂರು ನಗರಕ್ಕೆ ನೀರು ಇಲ್ಲ. ಗ್ರಾಮಾಂತರ ಪ್ರದೇಶಗಳಲ್ಲಿ ಕಿರು ನೀರು ಸರಬರಾಜು ಯೋಜನೆಗಳು ಕೆಲಸ ಮಾಡುತ್ತಿಲ್ಲ. ಯಾವುದೇ ರೀತಿಯಿಂದ ಕುಡಿಯುವ ನೀರಿಗೆ ತೊಂದರೆಯಾಗದಂತೆ ಮಾಡಬೇಕೆಂದು ನಾನು ಸರ್ಕಾರದಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಜಿಲ್ಲೆಯ ಲೋಡ್ ಷೆಡ್ಡಿಂಗ್ ಬಗ್ಗೆ ತಾವು ಒಂದು ಟೆಂಟೀಟೀವ್ ಕೊಡಿ, ಒಂದು ಗಂಟೆ ಲೋಡ್ ಷೆಡ್ಡಿಂಗ್ ಮಾಡುತ್ತೇವೆ ಯಾವ ಗಂಟೆಯಿಂದ ಯಾವ ಗಂಟೆಯವರೆಗೆ ಎಂದು. ಆದರೆ ನಮ್ಮ ತುಂಬಾ ವೆಂಟೆಡ್ ಡ್ಯಾಮ್ ನಿಂದ ನೀರು ಸರಬರಾಜು ಮಾಡುವುದಕ್ಕೆ ವಿದ್ಯುತ್ ಪೂರ್ಣ ಪ್ರಮಾಣದಲ್ಲಿ 24ಗಂಟೆಗಳ ಕಾಲ ಕೊಡಬೇಕು. ಕುಡಿಯುವ ನೀರಿಗೆ ಯಾವುದೇ ತೊಂದರೆಯಾಗದ ಹಾಗೆ ವಿದ್ಯಾರ್ಥಿಗಳಿಗೆ ಯಾವುದೇ ರೀತಿಯಲ್ಲಿ ತೊಂದರೆ ಯಾಗದ ಹಾಗೆ ತಾವು ವ್ಯವಸ್ಥೆ ಮಾಡಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.